ಎಂ.ಎ. ಕುಮಾರ್, ಬೆಂಗಳೂರು
ಹೆಣ್ಣು ಚಂಚಲೆ, ಕೋಮಲೆ ಎನ್ನುವುದು ಸತ್ಯವೆ?



ಅವಶ್ಯ ಸಹ. ಚಾಂಚಲ್ಯವಿರದಿದ್ದರೆ ಪ್ರೀತಿ ತವರಿಗೇ ಸೀಮಿತ; ಕೋಮಲತೆ ಇರದೆ ತಾಯ್ತನವಿಲ್ಲ.

ಆರ್. ಮಧುಸೂದನ್, ಹಾಸನ
'ಕೈ'ಗೆ ಬೆರಳೊತ್ತಿ ಈಗ ಕೈಕೈ ಹಿಸುಕಿಕೊಳ್ಳುತ್ತಿರುವವರ ಬಗ್ಗೆ ನಿಮ್ಮ 'ಕೈಪಿಡಿ' ಏನು?
ವಿಪರೀತ ಕೆಸರಿನಿಂದ ಕಮಲ ಅಸ್ವವಾದ್ದರಿಂದ ಹಸ್ತವೇ ಪ್ರಶಸ್ತ.

ಸಿ.ಎನ್. ನಾಗರಾಜ್, ಬೆಂಗಳೂರು
ಭಕ್ತಿಗೂ, ಭುಕ್ತಿಗೂ ವ್ಯತ್ಯಾಸವೇನು?
ಅಲ್ಲಿ ಧ್ಯಾನ; ಇಲ್ಲಿ ಧಾನ್ಯ.

ಬಿ.ಆರ್. ಉಷಾ, ಕೆನಡಾ
ತಾಳಿಗೂ, ತಾಳಕ್ಕೂ ಇರುವ ಸಂಬಂಧವೇನು?



ತಾಳಿಯಿಂದ ಜಂಟಿವರಸೆ; ಜಂಟಿವರಸೆಯಿಂದ ಮಿಶ್ರತಾಳ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಪಕ್ಕದ್ಮನೆ ಪಂಕಜ ಮುಂಚೆ ಟಿಕೆಟ್‌ಲೆಸ್ ಟ್ರಾವಲರ್; ಈಗ ಉಚಿತ ಪ್ರಯಾಣ. ಏನೂ ವ್ಯತ್ಯಾಸವಿಲ್ಲವಂತಲ್ಲ?
ಇದೆ. ಈಗ 'ಟಿಕೆಟ್ ಹಣ ಮುಂಡಾಯಿಸಿದೆ' ಎಂಬ ಸಂತೋಷ ಇಲ್ಲ.

ಸುಶೀಲಾ ಎಸ್. ಪಾಟೀಲ, ಸಂಕೇಶ್ವರ
ನಾ ನಿನಗಿದ್ದರೆ ನೀ ನನಗೆ ಏನು ಗ್ಯಾರಂಟಿ?
ವಾಕ್ಯವನ್ನೋದು; 'ನಾ ನಿನಗೆ' ನಂತರ 'ಇದ್ದರೆ' ಎಂಬ ಸಂದೇಹವಿದೆ; 'ನೀ ನನಗೆ'ಯಲ್ಲಿ ದೃಢತೆಯಿದೆ!

ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ
ಪ್ರಕೃತಿ, ವಿಕೃತಿಗಳಿಗೆ ಒಂದೊಂದು ಉದಾಹರಣೆ?
ಬ್ಯೂಟಿಪಾರ್ಲರಿನ ಒಳಹೋಗುತ್ತಿರುವ ಮತ್ತು ಹೊರಬರುತ್ತಿರುವ ವುಮನ್ನು.

ಪಿ.ಜೆ. ರಾಘವೇಂದ್ರ, ಮೈಸೂರು
ಶೌಚಾಲಯದೊಳು ಕುಳಿತು ಶುಭ ಸಂದೇಶ ಕಳುಹಿಸುವ ಶುಭಾಶಿತರಿಗೆ ನಿಮ್ಮ ಸಂದೇಶ?
ಗುಡ್. ಗುಡಿಯಲ್ಲಿ ಕುಳಿತು ಕೊಳಕು ಸಂದೇಶ ಕಳುಹಿಸುವವರಿಗಿಂತ ಇದು ಉತ್ತಮ.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ತುಂಬಾ ಪ್ರಶ್ನೆಗಳನ್ನು ಕೇಳಿದರೆ ಮಾತ್ರ ಬಹುಮಾನ ಬರುವುದೆ? ಇದು ನನ್ನ ಮಾನದ ಪ್ರಶ್ನೆ.
ಹೆಣ್ಣು ತಾಯಿಯಾಗಲು ಒಂದೇ ಮಗು ಸಾಕು ಎಂದಿದ್ದರು ಬೇಂದ್ರೆ.

ವಿ. ಹೇಮಂತಕುಮಾರ್, ಬೆಂಗಳೂರು
ಭಗ್ನಪ್ರೇಮಿಗಳು ಭುಜದ ಮೇಲೆ ಶಾಲು ಹಾಕಿಕೊಂಡಿರುತ್ತಾರೆ, ಏಕೆ?
ಬಡಪಾಯಿಗೆ ಹೃದಯವನ್ನು ಬೆಚ್ಚಗಾಗಿಸಲು ಅದೊಂದೇ ಗತಿಯಂತೆ.

ಸುರೇಶ್ ಬಿ.ವಿ. ಬೆಂಗಳೂರು
ಚುನಾವಣೆ ಎಂದರೆ ರಾಜಕಾರಣಿಗೆ ಸಂಭ್ರಮವೋ, ಭಯವೋ?
ಯಾರದೋ ಹಣದಲ್ಲಿ ನಡೆಯುವ ಜಾತ್ರೆಯೆಂದ ಮೇಲೆ, ಸಂಭ್ರಮವೇ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ನೀವು ಎಂದಾದರೂ ನಿಮ್ಮ ಮನೆಯವರ ಮುಂದೆ ಹಾಡು ಹೇಳಿದ್ದೀರಾ ರಾಮ್?
ಅವಳನ್ನು ಎಬ್ಬಿಸಬೇಕಾದ ತುರ್ತು ಬಿದ್ದಾಗ ಮಾತ್ರ.

ಮಲ್ಲಿಕಾರ್ಜುನ, ಸುರಧೇನುಪುರ
ಹೆಣ್ಣು ದ್ರಾಕ್ಷಾಯಿಣಿಯೋ, ದಾಕ್ಷಾಯಿಣಿಯೋ?
ಸದಾ ಶಿಸ್ತು, ದಕ್ಷತೆ ಎನ್ನುತ್ತಿದ್ದರೆ ದಾಕ್ಷಾಯಿಣಿ; (ಸ)ರಸಮಯವಾಗಿದ್ದರೆ ದ್ರಾಕ್ಷಾಯಿಣಿ.

## ಬಹುಮಾನಿತ ಪ್ರಶ್ನೆ

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ
ದೇವರು ಪ್ರತ್ಯಕ್ಷವಾದರೆ ಏನು ವರ ಕೇಳಲಿ?
ಭಾರತದ ಮತದಾರರಿಗೆ ಭಿಕ್ಷೆ ಬೇಡದೆ ವೋಟ್ ಹಾಕುವ ಬುದ್ಧಿ ಕೊಡಪ್ಪ ಎಂದು.

ರತ್ನ ಕೊರವರ, ಹೈದರಾಬಾದ್
ಉಳ್ಳವರು, ಇಲ್ಲದವರು ಎನ್ನುವ ಬದಲು ಎಲ್ಲರೂ ಉಳ್ಳವರು ಎನ್ನುವ ಕಾಲ ಬಂದರೆ ಚೆನ್ನವಲ್ಲವೆ?
ಈಗಲೂ ಎಲ್ಲರೂ ಉಳ್ಳವರೇ – ಕೆಲವರು ಬುದ್ಧಿ ಉಳ್ಳವರು; ಹಲವರು ಅಹಂಕಾರ ಉಳ್ಳವರು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ದುಡಿಯುವವರಿಗೂ, ಕುಡಿಯುವವರಿಗೂ ಏನು ವ್ಯತ್ಯಾಸ?



ದುಡಿಯುವವರಿಂದ ಮನೆ ನಡೆಯುತ್ತದೆ; ಕುಡಿಯುವವರಿಂದ ಸರ್ಕಾರ ನಡೆಯುತ್ತದೆ.

ರಾಜಶೇಖರ ಹಾದಿಮನಿ, ಧಾರವಾಡ
ಪೊಲೀಸರಿಗೆ ರಾತ್ರಿ 'ಗಸ್ತು' ಹೊಡೀರಿ ಎಂದರೆ 'ಸುಸ್ತು' ಅಂತಾರೆ. ಮಂತ್ರಿಗೆ ಹೇಳೋಣವೆಂದರೆ ಸಿಗುತ್ತಿಲ್ಲವಲ್ಲ?
ಪೊಲೀಸನ ತಪ್ಪಿಲ್ಲ; ರಾತ್ರಿಯೆಲ್ಲ ನಾಯಿಕಾಟ, ಹಗಲೆಲ್ಲ ನಾಯಕರ ಕಾಟದಿಂದ ಸುಸ್ತಾಗಿದ್ದಂತೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಇತ್ತೀಚೆಗೆ ಅನೇಕ ಸುದ್ದಿಪತ್ರಿಕೆಗಳು ಮುಖಪುಟವನ್ನು ಜಾಹಿರಾತು ಪುಟವಾಗಿ ಬಳಸುತ್ತವಲ್ಲಾ?
ಓದುಗರು ಒಳಪುಟಗಳನ್ನು ನೋಡುವುದೇ ಅನುಮಾನವಂತೆ.

ಪಿ. ಜಯವಂತ ಪೈ, ಕುಂದಾಪುರ
ಸಂತರೂ ರಾಜಕೀಯದತ್ತ ವಾಲುತ್ತಿದ್ದಾರಲ್ಲ?
ಗದ್ದುಗೆಯೆಂಬ ಊರ್ವಶಿ ಕಣ್ಣು ಮಿಟುಕಿಸಿದಳಂತೆ.

■ ರಾಮ್